# ಬಹುಮುಖಿ



# ಏರ್ ಕರ್ನಾಟಕ

## ಕವಿದ ಮಂಜಿನ ಹಾದಿಯಲ್ಲಿ ಕವಿತಾ ಚಾರಣ

### ಅಷ್ಟೆತ್ತರ ಹತ್ತಿದ ಕರ್ನಾಟಕದ ಮೊದಲ ಮಹಿಳೆ

ರೆಡ್ಡಿ ಸ್ಟೆಡಿ ಗೋ. ಹಾಗಂತ ಹೇಳಿದರೇ ಕವಿತಾ ರೆಡ್ಡಿ ಕಣ್ಮುಚ್ಚಿ ಏರುತ್ತಾ ಹೋಗುತ್ತಾರೆ. ಈ ಏರು ಹೊತ್ತಿನ ಆವೃತ್ತಿ ತಲುಪದ ಶಿ ಖರಗಳಿಲ್ಲ. ಚಾರಣವೆಂದರೆ ಸಂಚಾರಣವೆಂದರೆ ಪ್ರಾಣ. ವೃತ್ತಿ ಕೇರಿಗೆ ಎಳೆದರೆ ಪ್ರವೃತ್ತಿ ಏರಿಗೆ ಎಳೆಯುವ ಎತ್ತರಮುಖಿ ಇದೀಗ ಹಿಮಾಲಯ ತುತ್ತತುದಿಯ ಬುಡದಲ್ಲಿರುವ ಭಾಗೀರಥಿ ಕಲಶಕ್ಕೆ ಹೂ ಮುಡಿಸಿ ಬಂದಿದ್ದಾರೆ. ಅಲ್ಲಿಗೆ ಹೋಗಿ ಬಂದ ಕರ್ನಾಟಕದ ಮೊದಲ ಮಹಿಳೆ ಇವರು. ಬೆಟ್ಟ ಹತ್ತಿಳಿಯುತ ಕಷ್ಟ ಕಳಕೊಂಡ ಕವಿತಾ ರೆಡ್ಡಿ ಅನುಭವದ ಸವಾಲು, ಬೆರಗು ಮತ್ತು ಹತ್ತು ಹಲವು ಸಂಗತಿಗಳು ಇಲ್ಲಿವೆ.

■ ನಿರೂಪಣೆ: **ಕಟ್ಟೆ ಗುರುರಾಜ್**

ಬೆಂಗಳೂರಿನಿಂದ ದೆಹಲಿ ಮೂಲಕ ಹೃಷೀಕೇಶ ತಲುಪಿ ಅಲ್ಲಿಂದ ಗಂಗೋತ್ರಿಗೆ ಉಸ್ಸಪ್ಪಾ ಅಂಥ ಬಂದಿಳಿದಾಗ ಜೂನ್ 4.

ಹೋಟೆಲ್ ಮಂದಾಕಿನಿ ಕಿಟಕಿಯ ಸೆರಗು ಸರಿಸಿ ನಿಂತಾಗ ಹಸಿರ ಚಾದರ ಹೊದೆಸಿದ ಬೆಟ್ಟಗಳ ಸಾಲು. ಕಣ್ಣುಗಳು ಎವೆಇಕ್ಕದೆ ಭಾಗೀರತಿಯನ್ನು ಹುಡುಕುತ್ತಿತ್ತು. ಟ್ರೆಕ್ಕಿಂಗ್ ಅನುಭವ ಇದ್ದರೂ ಅದೇಕೋ ಭಾಗೀರತಿ ಮನಸ್ಸಿನಲ್ಲಿ ಒಂದು ರೀತಿ ಭಯ ಹುಟ್ಟಿಸಿದ್ದಳು; ಅಷ್ಟೇ ಉತ್ಸಾಹವನ್ನು ನೆಟ್ಟಿದ್ದಳು. ಭಾಗೀರತಿಯನ್ನು ಕರ್ನಾಟಕದ ಹೆಣ್ಣುಮಗಳು ಹತ್ತೇ ಇಲ್ಲ ಅನ್ನೋ ವಿಷಯ ನನ್ನ ದೇಹದ ನರನಾಡಿಗಳಲ್ಲಿ ಆತ್ಮವಿಶ್ವಾಸ ತುಂಬಿತ್ತು. ಬೆಂಗಳೂರಿನಿಂದಲೇ ಗೈಡು ಬೇಕು ಅಂತ ಹೇಳಿದ್ದರಿಂದ ಗೈಡ್- ಚಂದ್ರ ಬಹುದ್ದೂರ್, ದುರ್ಗಾ, ಅಡಿಗೆಯವ ಪ್ರೇಮ್ ರೆಡಿಯಾಗಿ ನಿಂತಿದ್ದರು. ಸಾಮಾನು ಸರಂಜಾಮು ಹೊತ್ತೊಯ್ಯಲು ಕೂಲಿಗಳು ಸಿದ್ಧರಾಗಿದ್ದರು. ನಮ್ಮ ಟೀಮ್‌ನಲ್ಲಿ ನಾನು, ಜಿಗ್ನಾ, ಸುಬ್ರಮಣ್ಯ, ಪ್ರಿಯ, ಆಂಟೆನ್, ಅನ್‌ಷುಕ್ ಹೀಗೆ 6 ಜನ ಇದ್ದೆವು. ಗಂಗೋತ್ರಿಗೆ ಬರುವ ಹೊತ್ತಿಗೆ ಕೈಯಲ್ಲಿ ಗಂಗೋತ್ರಿ ನ್ಯಾಷನಲ್ ಪಾರ್ಕ್‌ನಿಂದ 'ಬೆಟ್ಟ ಹತ್ತಬಹುದು' ಎನ್ನುವ ಗ್ರೀನ್ ಸಿಗ್ನಲ್ ಪತ್ರ ಸಿಕ್ಕಿಯಾಗಿತ್ತು. ಬಸ್ ಪ್ರಯಾಣದಿಂದ ಬಸವಳಿದಿದ್ದ ನಮಗೆ ಗಂಗೋತ್ರಿಯ ವಾತಾವರಣ ಫ್ರೆಶ್ ಮೂಡು ಕೊಟ್ಟಿತ್ತು. ಗಂಗೋತ್ರಿ- ಚೀರ್‌ಬಾಸ್, ಬೋಜ್‌ಬಾಸ್, ಗೋಮುಖ್- ನಂದವನ್- ಅಪ್ಪರ್‌ನಂದವನ್- ಕ್ಯಾಂಪ್ -1 ಕ್ಯಾಂಪ್-2. ಕೊನೆಗೆ ಭಾಗೀರತಿ ನೆತ್ತಿ. ಇದು ಹತ್ತೋ ಪ್ಲಾನ್. ಜೂನ್ 5ರಂದು ಗ್ಯಾಸ್, ಸೀಮೆಎಣ್ಣೆ, ಕುಕ್ಕರ್ ಎಲ್ಲವನ್ನು ಸಿದ್ಧ ಮಾಡಿಕೊಂಡಿದ್ದೆವು. ಬ್ಯುಟನ್ ಅಂದರೆ 5 ಸಾವಿರ ಅಡಿ ನಂತರ ಗ್ಯಾಸು, ಸೀಮೆಎಣ್ಣೆ ಕೆಲಸ ಮಾಡಲ್ಲ. ಆಗ ಬಳಸುವ ಸಾಧನ. ಇದರ ಚಿಕ್ಕ, ಚಿಕ್ಕ ಟಿನ್‌ಗಳನ್ನು ಎತ್ತಿಟ್ಟು ಕೊಂಡೆವು. ಭಾಗೀರತಿ ಹತ್ತಲು ಗುಂಡಿಗೆ ಗಟ್ಟಿ ಇರಬೇಕು. ಅದು ಹಿಮ, ಕಲ್ಲುಬಂಡೆ ಹಾಗೂ ಮಂಜಿನ ಗಡ್ಡೆಗಳ ತ್ರಿಸಂಗಮ ತಾಣ. ಒಂದೊಂದು ಬೆಟ್ಟವನ್ನು ಹತ್ತಲೂ ಒಂದೊಂದು ತಂತ್ರ ಇದೆ. ಈ ಬೆಟ್ಟದಲ್ಲಿ ಮೂರೂ ಇರುವುದರಿಂದ ಮೂರು ತಂತ್ರಗಳನ್ನು ಒಟ್ಟೊಟ್ಟಿಗೆ ಅಪ್ಲೈ ಮಾಡಬೇಕು.

ಹಿಲ್‌ಕ್ಲೈಂಬಿಂಗ್‌ಗೆ ಬೇಕಾದದ್ದು ಮೂರು- ಪೂರಕ ಪರಿಸರ, ಆರೋಗ್ಯ, ಸೂಕ್ತ ಪರಿಕರಗಳು. ಕೆಲ ಸರಿ ಎಲ್ಲಾ ಚೆನ್ನಾಗಿದ್ದೂ ನಮ್ಮ ಆರೋಗ್ಯ ಕೈಕೊಡುತ್ತದೆ. ಆರೋಗ್ಯ ಚೆನ್ನಾಗಿದ್ದರೆ ಪರಿಸರದ ಹಿನ್ನಡೆ. ಹೀಗೆ ಹಿಮಾಲಯ ಹತ್ತುವ ಕನಸು ನನಸಾಗಲು ಇವುಗಳ ಬೆಂಬಲ ಬೇಕು. ಆವತ್ತು ನಮ್ಮ ಪ್ಲಾನ್ ಪ್ರಕಾರ ಗಂಗೋತ್ರಿಯಿಂದ ನೇರವಾಗಿ ಬೋಜ್‌ಬಾಸ್‌ಗೆ ಹೋಗಬೇಕಿತ್ತು. ಇದು 8ಕಿ.ಮೀ ದೂರದಲ್ಲಿದೆ. 5ನೇ ತಾರೀಖು ಬೆಳಗ್ಗೆ 8 ಗಂಟೆಗೆ ಹೊರಟು ಸಂಜೆ ಹೊತ್ತಿಗೆ ಬೋಜ್‌ಬಾಸ್ ತಲುಪಿದೆವು. ಮಾರ್ಗ ಮಧ್ಯೆ ಸಿಗುವ ಚೀರ್‌ಬಾಸ್‌ನಲ್ಲಿ ನಿಲ್ಲಲಿಲ್ಲ. ನಾವು ಬರುವ ಮೊದಲೇ ಅಡಿಗೆಯವ ಪ್ರೇಮ್, ಪೋಟಸ್‌ಗಳು (ಕೂಲಿ)-ಗೈಡ್‌ಸೇರಿ ಬಿಸಿ, ಬಿಸಿ ಟೀ ತಯಾರು ಮಾಡಿದ್ದರು. ಚಳಿ 8 ಡಿಗ್ರಿ. ರಾತ್ರಿ ಬಿಸಿಬಿಸಿ ಅನ್ನ, ರೋಟಿ, ದಾಲ್ ಜೊತೆ ಚಳಿಯನ್ನು ನಂಜಿಕೊಂಡು ಊಟ ಮಾಡಿದ್ದಿದೆಯಲ್ಲಾ, ವಿಶಿಷ್ಟ ಅನುಭವ.

ನಮ್ಮ ಬೇಸ್‌ಕ್ಯಾಂಪ್ ಅಪ್ಪರ್ ನಂದವನದಲ್ಲಿ. ಬೇಸ್‌ಕ್ಯಾಂಪ್‌ನಲ್ಲಿ ಅಗತ್ಯವಾದ ಸಾಮಗ್ರಿಗಳನ್ನೆಲ್ಲಾ ದಾಸ್ತಾನು ಮಾಡುವುದು ನಮ್ಮ ನಾಳಿನ ಯೋಜನೆಯಲ್ಲಿ ಒಂದು. ಕ್ಯಾಂಪ್1, 2ಗೆ ಅಗತ್ಯವಿರುವಷ್ಟು ಮಾತ್ರ ಕೊಂಡೊಯ್ಯಬೇಕು. ಪೋಟಸ್‌ಗಳು 35ಕೆ.ಜಿ ತನಕ ಭಾರ ಹೊರುತ್ತಾರೆ. ಅವರದು ಸರಸರ ನಡಿಗೆ. ನಮಗಿಂತ ಹತ್ತು ಹೆಜ್ಜೆ ಮುಂದಿರುತ್ತಾರೆ. ಅಪಾಯ, ವಾತಾವರಣದ ಏರಪೇರುಗಳ ಬಗ್ಗೆ ಮೊದಲೇ ಸೂಚನೆ ಕೊಡುತ್ತಾರೆ. ಇವರಿಗೆ ದಿನಕ್ಕೆ 450+ ವಿಮೆ. ಇದನ್ನು ನಾವೇ ಮಾಡಿಸಬೇಕು.

ನಮ್ಮ ಜೊತೆಯಲ್ಲಿದ್ದ ಚಂದ್ರ ಬಹುದ್ದೂರ್, ದುರ್ಗಾ ಗೈಡುಗಳು ಪಳಗಿದವರೇ. ಎರಡು ಸಲ ಭಾಗೀರತಿ ನೆತ್ತಿ ಮುಟ್ಟಿ ಬಂದವರು. ಈ ಕಾರಣಕ್ಕೆ ತುಸು ನೆಮ್ಮದಿ. ಜೂನ್. 6ರಂದು ಬೋಜ್‌ಬಾಸ್ ಬಿಟ್ಟು ನಂದನವನದ ಕಡೆ ಹೊರಟಾಗ ಬೆಳಗ್ಗೆ 8. ತಿಂಡಿ, ತೀರ್ಥ ಎಲ್ಲ ಮುಗಿಸಿಯೇಬಿಟ್ಟೆವು. ಶೂ, ಕ್ಯಾಮರಾ, ಜಿಪಿಎಸ್, ಮೆಡಿಕಲ್ ಕಿಟ್ ಎಲ್ಲಾ ಸೇರಿಸಿದರೆ ಹೆಗಲ ಮೇಲೆ 15 ಕೆ.ಜಿ ಭಾರ ಇತ್ತು. ಇದನ್ನು ಹೊರಲೇ ಬೇಕು. ಒಳಗೆ ಕುದಿಯುತ್ತಿದ್ದ ಉತ್ಸಾಹದಿಂದಾಗಿ ಇದ್ಯಾವ ಲೆಕ್ಕವೂ ಇರಲಿಲ್ಲ.

ಸಂಜೆ ಹೊತ್ತಿಗೆ ನಂದನವನ ಸೇರಿದೆವು. ಬಂದ ಕೂಡಲೇ 6 ಜನರಿಗೂ ಪಲ್ಸ್ ರೇಟ್, ಬಿಪಿ, ಆಕ್ಸಿಜನ್ ಲೆವೆಲ್ ಅನ್ನು ಚೆಕ್ ಮಾಡುತ್ತಲೇ ಇದ್ದೆವು. ಪ್ರತಿ ದಿನ ಎರಡು ಬಾರಿ ಇದು ಕಂಪಲ್ಸರಿ. ಪಲ್ಸ್ ರೇಟ್, ಆಕ್ಸಿಜನ್ ತೀರ ಜಾಸ್ತಿ ಆಗಬಾರದು, ಕಡಿಮೆಯೂ ಆಗಬಾರದು. ನಂದವನದಲ್ಲಿ ರಾತ್ರಿ ನಮಗಾಗಿ ಸಿದ್ಧಗೊಂಡಂತಿತ್ತು. ಇಡೀ ಆಕಾಶ ನಕ್ಷತ್ರಗಳಿಂದ ತುಂಬಿ ಹೋಗಿತ್ತು. ಕಣ್ಣು ವಿಸ್ತರಿಸಿದಷ್ಟು ಅಗಲ. ಕೊನೆಯಿಲ್ಲದ ಆಕಾಶ ನೋಡಲು ಕಣ್ಣಲ್ಲಿ ಖಾಲಿಯಾಗದ ಹಸಿವು. ನಂದವನದಲ್ಲಿ ಅಲ್ಲಲ್ಲಿ ಹಿಮದ ಚಾದರ ಬಹುತೇಕ ಹಸಿರು. ಬೆಟ್ಟ ವೈಟ್‌ಮ್ಯಾಟ್. ಆಕಾಶ ಬ್ಲಾಕ್ ಮ್ಯಾಟ್. ಮಧ್ಯ ನಕ್ಷತ್ರ. ಎಂಥ ಕಾಂಬಿನೇಷನ್. ಎಲ್ಲರೂ ಕ್ಯಾಮರಗಳನ್ನು ತೆಗೆದು ಫಕ, ಫಕ ಫೋಟೋಗಳನ್ನು ಹೊಡೆದುಕೊಂಡೆವು.

ನಾಲ್ಕು ಟೆಂಟ್‌ಗಳಲ್ಲಿ ಒಟ್ಟು 12ಜನ. ಎಲ್ಲೂ ದೀಪವಿಲ್ಲ. ಮೇಣದ ಬತ್ತಿಗಳೇ ಗತಿ. ಚಳಿ ಜಾಸ್ತಿಯಾದರೆ ಇದೂ ಕೂಡ ನಂದುತ್ತದೆ. ರಾತ್ರಿ ಮುಗಿಯವುದೇ ಬೇಡ ಎನ್ನುವಷ್ಟು ಪ್ರೀತಿ ಹುಟ್ಟಿಸಿತ್ತು ನಂದನವನ ಪ್ರಕೃತಿ.

ಬೆಳಗ್ಗೆ 4 ಗಂಟೆ ಇರಬಹುದು. ಗೈಡ್ ಎದ್ದು ಹಿಮ ಬೀಳುತ್ತಿದೆ ಹುಷಾರ್ ಎಂದರು. 5ಕ್ಕೆ ಪೂರ್ಣ ಪ್ರಮಾಣದ ಎಚ್ಚರಿಕೆಯಾಯಿತು. ನೋಡಿದರೆ ಟೆಂಟ್ ಪೂರ್ತಿ ಹಿಮ ಹೊದ್ದಿದೆ. ಮೆಲ್ಲಗೆ ಎದ್ದು ಎಲ್ಲರೂ ಟೆಂಟ್ ತಲೆ ಮೇಲಿನ ಹಿಮವನ್ನು ಕೊಡವಿಕೊಂಡೆವು. ಟೆಂಟ್-ಫ್ಲಾಟ್ ಮಾಡಬೇಕು. ಸ್ನೋ ತೆಗೆಯಬೇಕು. ಒಂದೊಂದು ಸಲ ಈ ರೀತಿ ಟೆಂಟ್ ಹಾಕೋಕೆ ಗಂಟಗಟ್ಟಲೆ. ಒಂದು ಸಲ ಟೆಂಟ್ ಒಳಗೆ ಹೋದರೆ ಹೊರಗಿನ ವಾತಾರವಣಕ್ಕೆ ಆಗಾಗ ಮೈ ಒಡ್ಡುತ್ತಿರಬೇಕು. ಹೀಗೆ ಮಾಡದೇ ಇದ್ದರೆ ಟ್ರೆಕ್ಕಿಂಗ್ ಮಾಡಿದಂತೆಯೇ.

ಪುಟ 2





## ಜೀವವಾಕ್ಯ

### ಏರು ಹಾದಿಯ ಹಂಬಲ

ಅದೇ ಆಸಕ್ತಿ ಒಬ್ಬನ ಖಿನ್ನತೆಗೆ ಮತ್ತೊಬ್ಬನ ಪ್ರಸನ್ನತೆಗೆ ಹೇಗೆ ಕಾರಣವಾಗಿಬಿಡುತ್ತದಲ್ಲಾ?

ಒಬ್ಬ ಸಂಗೀತಗಾರನಾಗಬೇಕೆಂದು ಜೀವಮಾನವಿಡೀ ಹಂಬಲಿಸುತ್ತಾನೆ. ಹಂಬಲ ಕೈಗೂಡದಾದಾಗ ಹತಾಶೆಯಾಗಿ ಬದಲಾಗುತ್ತದೆ, ಹತಾಶೆಯಿಂದ ಖಿನ್ನತೆಗೆ, ಖಿನ್ನತೆಯಿಂದ ಜೀವನದಲ್ಲಿ ಆಸಕ್ತಿ ಹೊರಟುಹೋಗುವೆಡೆಗೆ.

ಮತ್ತೊಬ್ಬನ ಆಸಕ್ತಿ ಅವನ ಜೀವನದ ಬಡತನವನ್ನು ಮೆಟ್ಟಿನಿಲ್ಲುವುದಕ್ಕೆ ಸ್ಫೂರ್ತಿಯಾಗುತ್ತದೆ. ಅವನ ಅಂಗವೈಕಲ್ಯವನ್ನು ಮೀರಿ ಬೆಳೆಯುವುದಕ್ಕೆ ಪ್ರೇರಣೆಯಾಗುತ್ತದೆ.

ಹಾಗಿದ್ದರೆ ಇಲ್ಲಿ ಆಸಕ್ತಿ ಎನ್ನುವ ಅಂಶ ಇತ್ಯಾತ್ಮಕವಾ, ನೇತ್ಯಾತ್ಮಕವಾ?

ಉತ್ತರ ಸ್ಪಷ್ಟ. ನಮ್ಮ ಆಸಕ್ತಿಯನ್ನು ಒಂದು ದಾರಿಯಂತೆ ಕಾಣಬಹುದು. ಆ ದಾರಿ ಶತಮಾನದಿಂದ ಮಲಗಿದಲ್ಲೇ ಮಲಗಿರುತ್ತದೆ. ಆ ದಿನ ಯಾರೋ ಅಲ್ಲಿಂದಲೇ ಸಾಗಿ ಹೋಗಿ ತಮ್ಮ ಗುರಿ ಸೇರಿಕೊಂಡರು, ಕೆಲವರಿಗೆ ಆ ದಾರಿಯಲ್ಲಿ ಸಾಗುತ್ತಿರುವಾಗ ಕಲ್ಲೋ, ಮುರಿದ ಮರವೋ ಅಡ್ಡ ಬಂದು ಗುರಿ ತಲುಪಲಾಗಲಿಲ್ಲ. ಆದರೆ ಆ ದಾರಿ ಅಲ್ಲಿಂದಿಲ್ಲಿಗೂ ಸಾಗುವವರಿಗೆ ವಾಹಕವಾಗಿ ನಿಂತೇ ಇದೆ. ಹಾಗಾಗಿ ಒಬ್ಬನನ್ನು ಹುರಿಗೊಳಿಸುವುದು ಮತ್ತು ಹತಾಶೆಗೊಳಪಡಿಸುವುದು ಆಸಕ್ತಿಯ ತಪ್ಪಲ್ಲ, ಸರಿಯೂ ಅಲ್ಲ.

ಮತ್ತೆ ಅದು ಬಂದು ನಿಲ್ಲುವುದು ನಮ್ಮ ನಿಮ್ಮ ಮನಸಿನಲ್ಲೇ. ನಾವು ಬದುಕನ್ನು ರೂಪಿಸಿಕೊಳ್ಳುವುದಕ್ಕೆಂದು ಒಂದಿಷ್ಟು ಕೆಲಸ ಮಾಡುತ್ತೇವೆ, ವೃತ್ತಿಗೂ ಮೀರಿ ಮತ್ತೊಂದನ್ನು ಬಯಸುತ್ತೇವೆ, ಹಂಬಲಿಸುತ್ತೇವೆ. ಅದು ಕೈಗೂಡುವ ನಿಟ್ಟಿನಲ್ಲಿ ಜೀವನ್ಮರಣ ಹೋರಾಟ ನಡೆಸಿದರೆ ನಿಮ್ಮಕೈವಶವಾಗುತ್ತದೆ. ಈ ವಾರ ಅಂಥ ಆಸಕ್ತಿಯನ್ನು ಸಾಧನೆಯ ಎತ್ತರಕ್ಕೆ ಏರಿಸಿದ ಹೆಣ್ಮಗಳ ಯಶೋಗಾಥೆ.

-ಜೀವಾನಂದ



## ಕವಿತಾ ಯಾರು?

ಕವಿತಾ ಅವರ ಮೂಲ ಆನೇಕಲ್. ಈಗ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸ. ಓದಿದ್ದು ಬಿಎಸ್‌ಸಿ. 14 ವರ್ಷಗಳ ಕಾಲ ವಿವಿಧ ಕಂಪನಿಗಳಲ್ಲಿ ಕೆಲಸ ಮಾಡಿದ ಅನುಭವ. ಚಿಕ್ಕಂದಿನಿಂದಲೂ ಚಾರಣ ಎಂದರೆ ಪ್ರೀತಿ. ಇದಕ್ಕೆ ಕಾರಣ ಎನ್‌ಸಿಸಿ. ಗಣರಾಜ್ಯೋತ್ಸವದಂದು ದೆಹಲಿಯಲ್ಲಿ ನಡೆಯುವ ಪಥಸಂಚಲನದಲ್ಲಿ ಇವರು ಭಾಗವಹಿಸಿ ಆಗಿನ ಪ್ರಧಾನಿ ಪಿ.ವಿ. ನರಸಿಂಹರಾಯರಿಂದ ಅವಾರ್ಡ್ ಪಡೆದಿದ್ದಾರೆ. ಈವರೆಗೆ ಕರ್ನಾಟಕದ ಯಾವ ಪರ್ವತಗಳನ್ನು ಬಿಟ್ಟಿಲ್ಲ. ನೇಪಾಳ ದಾಟಿ ಹಿಮಾಲಯದ 10ಕ್ಕೂ ಹೆಚ್ಚು ಬೆಟ್ಟಗಳನ್ನು ಲೆಕ್ಕವಿಲ್ಲದ ಸಲ ಹತ್ತಿ ಇಳಿದ ಅನುಭವ ಇವರ ಕಾಲಿಗೆ. ಕವಿತಾಗೆ ಈಗ ಫುಲ್ ಟೈಂ ಅಡ್ವೆಂಚರ್ ಕ್ಯಾಂಪ್ ಮಾಡೋದೇ ಕೆಲಸ.



## ಬೆಟ್ಟದ ಸೂರ್ಯ

ಬೆಟ್ಟ ಹತ್ತಬೇಕಾದರೆ ದಷ್ಟಪುಷ್ಟವಾಗಿರುವ ಇಬ್ಬರು ಟೀಂ ಲೀಡ್ ಮಾಡೋಕೆ ಬೇಕು. ಮಾನಸಿಕ ಹಾಗೂ ದೈಹಿಕವಾಗಿ ಗಟ್ಟಿಯಾಗಿರಬೇಕು. ಬೆಟ್ಟ ಹತ್ತುವುದು ಎಂದರೆ ಮೊದಲು ಹೇಗೆ, ಎಲ್ಲಿ, ಏನು ಬಳಸಿಕೊಂಡು ಹೋಗಬೇಕು ಅನ್ನೋದು ಪಾಯಿಂಟ್ ಆಗಬೇಕು. ಇಲ್ಲಿ ರಾಷ್ಟ್ರೀಯ ಹೆದ್ದಾರಿ ರೀತಿಯ ರಸ್ತೆಗಳಿಲ್ಲ. ಕಂಡದ್ದೇ ದಾರಿ. ಮೊದಲು ಟೀಂ ಲೀಡರ್ ಹಗ್ಗ ಹಾಕಿ ಪಾಯಿಂಟ್‌ಗಳನ್ನು ಮಾಡಿಕೊಂಡು ಮುಂದಕ್ಕೆ ಹೋಗುತ್ತಾರೆ. ಎಲ್ಲಾ ಚೆನ್ನಾಗಿದೆ ಎಂದು ತಿಳಿಸಿದಾಗ ಬೆನ್ನ ಹಿಂದಿನ ಸದಸ್ಯರು ಹಿಂಬಾಲಿಸುತ್ತಾರೆ. ಹೀಗೆ ಟೀಂ ಲೀಡ್ ಮಾಡುವ ಅದೃಷ್ಟ ನನ್ನದಾಗಿತ್ತು. ಅದೃಷ್ಟ ಎಂಬಂತೆ ಸೂರ್ಯ ಅಲ್ಲಿ ಚಟುವಟಿಕೆಯಲ್ಲಿದ್ದ. ಸುಮಾರು 3-4 ದಿನದಿಂದ ನಾವು ಸೂರ್ಯನನ್ನು ನೋಡಿರಲಿಲ್ಲ. ಅಲ್ಲೆಲ್ಲಾ ಬಿಸಿಲು ಹುಟ್ಟುವುದೇ ಬೆಳಗ್ಗೆ 11ಕ್ಕೆ, ಸಂಜೆ 4ಕ್ಕೆ ಕತ್ತಲು ಆವರಿಸುತ್ತದೆ. ಬೆಳಗ್ಗೆ ನಾಲ್ಕಕ್ಕೇ ಬಿಸಿ, ಬಿಸಿಲು. ಬದುಕು ಒಂದು ರೀತಿ ವಿಚಿತ್ರ.



ಭಾಗೀರತಿ ನೆತ್ತಿಯ ಮೇಲೆ ನಿಂತರೆ ಕಣ್ಣನ್ನು ನಂಬಲಾಗದ ದೃಶ್ಯ. ಎದುರಿಗೆ ಶಿವಲಿಂಗ್ ಬೆಟ್ಟ. ನೋಡಿದ ತಕ್ಷಣ ಚಕ್ಕನೆ ಜ್ಞಾಪಕಕ್ಕೆ ಬಂದದ್ದು ಶಿವಗಂಗೆ ಬೆಟ್ಟ. ಅದು 700, ಇದು 7000 ಅಡಿ. ಎರಡರ ರೂಪ ಒಂದೇ. ಬೆಟ್ಟ ಸಂಪೂರ್ಣ ಲಿಂಗಾಕಾರದಲ್ಲಿದೆ. ಪಕ್ಕದಲ್ಲಿ ವಾಸುಕಿ ಬೆಟ್ಟ. ಇದನ್ನು ಸರ್ಪವೊಂದು ಸುತ್ತಿಕೊಂಡಂತೆ ಕಾಣುತ್ತಿದೆ. ಆಗಾಗ ಚಾಮರದಂತೆ ಬೀಸುವ ಚುಂಬಕ ಗಾಳಿ. ಸ್ವರ್ಗ ಕಣ್ಣ ಮುಂದೆ. 20 ನಿಮಿಷಗಳ ಕಾಲ ಜಗತ್ತನ್ನೇ ಮರೆತೆವು. ಸುಮಾರು 17 ದಿನದ ಒದ್ದಾಟದಿಂದ ಆದ ಶ್ರಮ ಒಮ್ಮೆಲೆ ಕರಗಿ ಭಾಗೀರತಿಯ ಬೆಟ್ಟದಲ್ಲಿ ಹರಿದು ಹೋದಂತಾಗಿ ದೇಹದಲ್ಲಿ ಹೊಸ ಚೈತನ್ಯ ಸೇರಿಕೊಂಡಂತಾಯಿತು. ಮಾತುಗಳೇ ಮರೆತು ಹೋಗಿದ್ದರಿಂದ ಬೆಟ್ಟದ ನೆತ್ತಿಯಲ್ಲಿ ನಿರ್ವಾತದ ಹಬೆ.